ವಿವರಿಸಲು ಆ ವ್ಯಕ್ತಿ ಹರಸಾಹಸ ಪಡುತ್ತಿದ್ದರು. ಅದೇನೋ ಕಪ್ಪೆಚಿಪ್ಪಂತೆ, ಅದರೊಳಗೆ ಜೀವಕೋಶದ ಪೂರಣವಂತೆ, ನೀರಿನ ಕೊಳದಲ್ಲಿ ಬಿಟ್ಟು ಮುತ್ತಿನ ಬೆಳೆ ತೆಗೆಯುವುದಂತೆ, ಮುತ್ತಿಗೆ ವಿಪರೀತ ಬೆಲೆಯಂತೆ...

ಸಂ ಚಿಕ್ಕವನಿದ್ದಾಗ ತಮ್ಮೂರಿನ ಕೆಲವು ದುರಾಶೆಯ ಜನ ಮುಂಗಾರು ಮಳೆಯ ಆರಂಭದಲ್ಲಿ ಆಂಧ್ರದ ಗಡಿಗುಡ್ಡಕ್ಕೆ ಓಡುತ್ತಿದ್ದರು. ಆ ಗುಡ್ಡದಲ್ಲಿ ವಜ್ರದ ಕಲ್ಲುಗಳು ತೇಲುತ್ತವೆ ಎಂಬ ಪ್ರತೀತಿ. ಅವು ಎಲ್ಲರಿಗೂ ಸಿಗುವುದಿಲ್ಲ, ಅದಕ್ಕೂ ಅದೃಷ್ಟ ಬೇಕು ಎಂಬ



ವಿವರಣೆಯಿಂದ ಪ್ರತೀವರ್ಷ ತಮ್ಮ ಅದೃಷ್ಟವನ್ನು ಪರೀಕ್ಷೆಗೆ ಒಡ್ಡುವವರ ಸಂಖ್ಯೆ ಹೆಚ್ಚುತ್ತಲೇ ಇತ್ತು. ಈ ಪರೀಕ್ಷೆಯಲ್ಲಿ ಪಾಸಾಗಿ ವಜ್ರದ ಹರಳು ತಂದ ಒಂದು ಉದಾಹರಣೆಯೂ ಎದುರಿಗಿರಲಿಲ್ಲ. ಆದರೂ ಯಾರೂ ಹತಾಶರಾಗದೆ ಶೋಧಕಾರ್ಯ ಮುಂದುವರಿಸುತ್ತಿದ್ದುದು ಮಹಾ ಆಶ್ಚರ್ಯ. ಈ ಕಥೆಯನ್ನು ತಮಾಷೆಯಾಗಿ ಹೇಳಿ ಭ್ರಮೆ ಇಳಿಸಲು ಸಂ ಮಾಡಿದ ಪ್ರಯತ್ನವು ಆ ವ್ಯಕ್ತಿಯ ಉತ್ಸಾಹದ ಎದುರು ವ್ಯರ್ಥವಾಯಿತು.

'ಮಾತು ಸೂತಕ, ನಿರರ್ಥಕ' ಎಂದು ನಂಬುವ ಸಂ ನೆರವಿಗೆ ಆ ಕ್ಷಣದ ಆಪದ್ಬಾಂಧವನಂತೆ ಬಂದಿದ್ದು ಉಪಸಂ. ಇತ್ತೀಚೆಗೆ ತಾನು ಭಾಗವಹಿಸಿದ್ದ ಕೇರಳದ ಸಾಹಿತ್ಯ ಹಬ್ಬದ ಅನುಭವವನ್ನು ಎಂದಿನ ಮೆಲುದನಿಯಲ್ಲಿ, ಎಲ್ಲಾ ಸೂಕ್ಷ್ಮ ವಿವರಗಳೊಂದಿಗೆ ಹೇಳತೊಡಗಿದ. ಸಮುದ್ರ ದಂಡೆಯಲ್ಲಿ ಸಹಜ ಕಲಾತ್ಮಕತೆ ಆವರಿಸುವಂತೆ ಏರ್ಪಡಿಸಿದ್ದ ವಿವಿಧ ಕಾರ್ಯಕ್ರಮಗಳು, ಆಸಕ್ತರ ಆಳವಾದ ಪಾಲ್ಗೊಳ್ಳುವಿಕೆ, ಸ್ಪಂದನೆ ಕುರಿತು ಉಪಸಂ ಹೇಳತೊಡಗಿದರೆ ಕನ್ನಡಿಗರ ಅಭಿರುಚಿಯ ಮಿತಿಗಳು, ಆಯೋಜಕರ ಅವಾಂತರಗಳು ತಂತಾನೇ ಕಣ್ಣೆದುರು ಸುಳಿಯುತ್ತವೆ.

ಗೌರಿ ಲಂಕೇಶ್ ಹತ್ಯೆ ಸಂದರ್ಭದಲ್ಲಿ ತೆಗೆದುಕೊಂಡ ನಿಲುವಿನಿಂದಾಗಿ ಪ್ರಕಾಶ ರೈ ಅಂತಹವರು ಕರ್ನಾಟಕದಲ್ಲಿ ಬಹಳಷ್ಟು ವಿರೋಧ ಕಟ್ಟಿಕೊಳ್ಳಬೇಕಾಯಿತು. ಇದೇ ಕಾರಣಕ್ಕಾಗಿ ಅವರು ಕೇರಳದಲ್ಲಿ ಹೆಚ್ಚಿನ ಜನಪ್ರಿಯತೆ, ಅಭಿಮಾನ ಗಳಿಸುವುದರಲ್ಲಿ ವಿಶೇಷವಿದೆ. ಸಾಹಿತ್ಯ, ಕಲೆ, ಸಿನಿಮಾ ನೋಡುವುದಕ್ಕೆ ಜನರನ್ನು ಸಿದ್ಧಗೊಳಿಸುವಲ್ಲಿ ಈ ಮಾಧ್ಯಮಗಳು ಸೋತವೇ ಅಥವಾ ಜನರೇ ಸಿದ್ಧಗೊಳ್ಳುವಿಕೆಗೆ ವಿಮುಖರಾದರೇ ಎಂಬ ಪ್ರಶ್ನೆ ಮಾತ್ರ ಹಾಗೇ ಉಳಿಯುತ್ತದೆ.

* * *

ಬಿಸಿರೊಟ್ಟಿ ಕಾಳುಪಲ್ಯ ಊಟದ ನಂತರ ಹೊರಡುವ ಸಮಯದಲ್ಲಿ ಕೊಟ್ಟ ಪುಸ್ತಕದ ಹಾಳೆಗಳನ್ನು ತಿರುವುತ್ತಾ ಹುಡುಗ, "ಸರ್, ನನಗೆ ಸಾಹಿತ್ಯ ಕೃತಿಗಳಿಗಿಂತ ಸಾಹಿತಿಗಳನ್ನು ಓದುವುದರಲ್ಲಿ ಹೆಚ್ಚು ಆಸಕ್ತಿ" ಎಂದು ಗಜಗಾತ್ರದ ದರ್ಶನವನ್ನು ಸಂ ತಲೆಗೆ ತುಂಬಿ ವಿವರಣೆಯನ್ನೂ ನೀಡಿದ:

'ಇತ್ತೀಚೆಗೆ ಸಾಹಿತಿಯೊಬ್ಬರ ನೂರನೇ ಪುಸ್ತಕ ಹೊರಬಂದಿತಂತೆ. ನಾನು ಅವರ ಒಂದು ಪುಸ್ತಕವನ್ನೂ ಓದಿಲ್ಲ. ಆದರೆ ಅವರನ್ನು ಸಂಪೂರ್ಣ ಓದಿದ್ದೇನೆ. ಹಾಗಾಗಿ ಅವರ ಪುಸ್ತಕಗಳನ್ನು ಓದುವ ಅಗತ್ಯವಿಲ್ಲವೆಂಬುದು ನನಗೆ ಅರ್ಥವಾಗಿದೆ'.

ಸಾಹಿತಿಗಳ ಭ್ರಮೆಗಳ ಮೇಲೆ ಡ್ರೋನ್ ಉಡಾಯಿಸಿದ ಹುಡುಗ ಏನೂ ಆಗಿಲ್ಲವೆಂಬಂತೆ ಸರಾಗವಾಗಿ ಗೇಟು ತೆರೆದು ನಿಧಾನವಾಗಿ ಹೊರಗೆ ಹೆಜ್ಜೆ ಇರಿಸತೊಡಗಿದ... ನಿಜದಲ್ಲಿ ಉಪಸಂ ಹೆಜ್ಜೆ ಇರಿಸಿದ್ದು ಸಂ ಒಳಗೆ!

●